**ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು**
**ಪ್ರಸ್ತಾಪಿಸಿರುವ ಶೂನ್ಯವೇಳೆ ಸೂಚನೆಗೆ ಉತ್ತರ**

**ವಿಷಯ:** ಪ್ರಭಾವಿಗಳ ಕುಟುಂಬದ ಆಶ್ರಯದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಂದಾಗಿ ಶಿವಮೊಗ್ಗ ಜಿಲ್ಲೆಯು ಅಕ್ಷರಶ: ನಲುಗಿದ್ದು, "ಪ್ರಭಾವಿಗಳ ಆಶ್ರಯ: ಅಕ್ರಮಗಳದ್ದೆ ಕಾರುಬಾರು" ಎನ್ನುವ ಶೀರ್ಷಿಕೆಯಡಿ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಭದ್ರೆಯಿಂದ ಮರಳು ತೆಗೆಯುವ, ಹಗಲು-ರಾತ್ರಿ ಪಾಳಿಯಂತೆ ಇಸ್ಪೀಟ್ ಆಡಿಸುವ ದಂಧೆ, ಗಾಂಜಾ, ಮೀಟರ್ ಬಡ್ಡಿ ವಹಿವಾಟು ಹಾಗೂ ಅರಣ್ಯ ಒತ್ತುವರಿ ಕಾರ್ಯ ಇಲ್ಲಿ ರಾಜಾರೋಷವಾಗಿ ನಡೆಯುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ಭದ್ರಾವತಿಯ ಭದ್ರಾ ಸೇತುವೆಯಿಂದ ಮೊದಲುಗೊಂಡು ಕೂಡಲಿವರೆಗೂ ಅಕ್ರಮವಾಗಿ ಮರಳು ಸಂಗ್ರಹಿಸುವ ಕಾರ್ಯ ನಡೆಯುತ್ತಿದ್ದು, ಅನಧಿಕೃತವಾಗಿ ಜೆಸಿಬಿ, ಹಿಟಾಚಿಗಳು ಸದ್ದು ಮಾಡುತ್ತಿವೆ. ಇವೆಲ್ಲವೂ ತಾಲ್ಲೂಕಿನ ದೇವಸ್ಥಾನದ ಕಾಮಗಾರಿ ಹೆಸರಿನಲ್ಲಿ ಮರಳು ಒಯ್ಯುತ್ತಿರುವುದು ವಿಪರ್ಯಾಸವೇ ಸರಿ. ಅದೇ ರೀತಿ ಭದ್ರಾವತಿ ನಗರಸಭೆಯ ಪ್ರತಿನಿಧಿಯೊಬ್ಬರು ಇಸ್ಪೀಟ್ ಆಡಿಸುತ್ತಿರುವ ಬಗ್ಗೆ ಪತ್ರಿಕಾ ವರದಿಯಲ್ಲಿ ಉಲ್ಲೇಖಿಸಿದ್ದು, ಪ್ರತಿ ದಿನ ರೌಡಿಗಳಿಗೆ ಹಾಗೂ ಪೊಲೀಸರಿಗೆ ಮಾಮೂಲಿ ತಲುಪುತ್ತಿದೆ. ಈ ಅಕ್ರಮಗಳಿಗೆ ಕಡಿವಾಣವೇ ಇಲ್ಲವಾಗಿದ್ದು, ಎಂದೋ ಒಂದೆರಡು ದಿನ ಬಿಗಿಯಾಗಿ ಮತ್ತೆ ಯಥಾಪ್ರಕಾರ ಮುಂದುವರೆಯುವುದು ನಿರಂತರವಾಗಿದೆ. ಇದರ ಜೊತೆಗೆ ಭದ್ರಾವತಿ ತಾಲ್ಲೂಕಿನ ದೊಡ್ಡೇರಿ ಗ್ರಾಮ ಪಂಚಾಯಿತಿ ಭಾಗದಲ್ಲಿ ಪ್ರಭಾವಿಗಳಿಂದ ಅರಣ್ಯ ಭೂಮಿ ಒತ್ತುವರಿ ಕೂಡ ಅವ್ಯಾಹತವಾಗಿ ನಡೆದಿದ್ದು, ಅಂದಾಜು 218 ಎಕರೆ ಕಿರು ಅರಣ್ಯ ಒತ್ತುವರಿಗೆ ಸಿಲುಕಿದೆ ಎಂಬ ಮಾತುಗಳು ಕೇಳಿಬಂದಿವೆ. ಇಂತಹ ಅಕ್ರಮ ಚಟುವಟಿಕೆಗಳಿಂದ ಹಾಗೂ ಅಕ್ರಮ ಹಣದಲ್ಲಿ ಸಾಮಾಜಘಾತುಕ ಶಕ್ತಿಗಳು ಒಂದಾಗಿ ಶಿವಮೊಗ್ಗ ಜಿಲ್ಲೆಯ ಹೆಸರಿಗೆ ಚ್ಯುತಿ ಬರಬಹುದಾದ ಪ್ರಸಂಗ ಮುಂದೊಂದು ದಿನ ಬರಲಿದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗದಲ್ಲಿ ಇಸ್ಪೀಟ್ ದಂಧೆ, ಜೂಜಾಟ, ಬಡ್ಡಿ ದಂಧೆ, ಅಕ್ರಮ ಮರಳುಗಾರಿಕೆಗೆ ಸದ್ದು ಮಾಡುತ್ತಿದ್ದು, ಸರ್ಕಾರ ಈ ವಿಚಾರಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅಕ್ರಮಗಳಿಗೆ ಕಡಿವಾಣ ಹಾಕಬೇಕೆಂಬುದರ ಕುರಿತು.

**ಉತ್ತರ:** ಶಿವಮೊಗ್ಗ ಜಿಲ್ಲೆಯಾದ್ಯಂತ ಅಕ್ರಮ ಚಟುವಟಿಕೆಗಳು ನಡೆಯದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿರುತ್ತದೆ ಹಾಗೂ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಾಗಿದೆ:-

1. ಜಿಲ್ಲೆಯ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಪ್ರತಿ ದಿನ ಸಂಜೆ 6.00 ಗಂಟೆಯಿಂದ 10.00 ಗಂಟೆಯವರೆಗೆ ಏರಿಯಾ ಡಾಮಿನೇಷನ್ ಮಾಡುವುದರ ಮೂಲಕ ವಿಶೇಷ ಕಾರ್ಯಾಚರಣೆ ನಡೆಸಿ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಗಾಂಜಾ ಸೇವನೆ ಮಾಡಿರುವ ಬಗ್ಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಪ್ರಕರಣ ದಾಖಲಿಸಲಾಗುತ್ತಿದೆ.

2. ಠಾಣಾ ವ್ಯಾಪ್ತಿಗಳ ಸೂಕ್ಷ್ಮ ಪ್ರದೇಶಗಳಲ್ಲಿ ವಾರದಲ್ಲಿ 02 ದಿನ ನಾಕಾ ಬಂದಿಗಳನ್ನು ನಿಯೋಜಿಸುವ ಮೂಲಕ ಅಕ್ರಮ ಮರಳು ಸಾಗಾಣಿಕೆ, ಮಾದಕ ವಸ್ತು ಸಾಗಾಣಿಕೆ, ಅಕ್ರಮ ಗೋಸಾಗಾಣಿಕೆ ಮುಂತಾದ ಅಕ್ರಮ ಚಟುವಟಿಕೆಗಳ ಮೇಲೆ ನಿಗಾವಹಿಸಲಾಗಿದೆ.

3. ನಿರಂತರವಾಗಿ ಬೀಟ್/ಗಸ್ತು ಜಾರಿ ಮಾಡಿ ತಳಮಟ್ಟದಲ್ಲಿ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವಂತೆ ಬೀಟ್ ಸಿಬ್ಬಂದಿಯವರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಬೀಟ್ ವಾಟ್ಸಾಪ್ ಗ್ರೂಪ್‌ಗಳನ್ನು ರಚಿಸಿದ್ದು, ಸಾರ್ವಜನಿಕರಿಂದ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

4. ಠಾಣಾ ವ್ಯಾಪ್ತಿಯ "ಎ" ಹಳ್ಳಿಗಳಲ್ಲಿ 20 ಜನ ಯುವಕರನ್ನೊಳಗೊಂಡ ಯುವ ಪಡೆಯನ್ನು ರಚಿಸಿ, ಸದರಿಯವರಿಂದಲೂ ಸಹ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

5. ಅಕ್ರಮಗಣಿಗಾರಿಕೆ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಟಾಸ್ಕ್ ಫೋರ್ಸ್ ರಚನೆ ಮಾಡಿದ್ದು, ಸದರಿಯವರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ ಅಕ್ರಮ ಮರಳು ಗಣಿಗಾರಿಕೆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಅಕ್ರಮ ಚಟುವಟಿಕೆಗೆ ಸಂಬಂಧಿಸಿದಂತೆ ಕಳೆದ ಒಂದು ವರ್ಷದಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ:-

| **ವರ್ಷ** | **ಅಕ್ರಮ ಮರಳು ಗಣಿಗಾರಿಕೆ, ಸಾಗಣಿಕೆ ಮತ್ತು ಸಂಗ್ರಹ (ಎಫ್ಐಆರ್ ಪ್ರಕರಣ)** | **ಅಕ್ರಮ ಮರಳು ಗಣಿಗಾರಿಕೆ, ಸಾಗಣಿಕೆ ಮತ್ತು ಸಂಗ್ರಹ (ದಂಡ ವಿಧಿಸಿದ ಪ್ರಕರಣ)** | **ಎನ್‌ಡಿಪಿಎಸ್** | **ಓಸಿ ಮಟ್ಕಾ** | **ಮೀಟರ್ ಬಡ್ಡಿ** | **ಇಸ್ಪೀಟ್ ಜೂಜಾಟ** |
|---|---|---|---|---|---|---|
| 2024 | 10 | 53 | 380 | 291 | 05 | 128 |
| 2025 | 03 | 20 | 80 | 26 | 02 | 28 |

---

ಹೆಚ್‌ಡಿ 141 ಎಸ್ಎಸ್‌ಟಿ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು